ಮೊದಲು ಎತ್ತಿನ ಗಾಡಿಗಳಿಗೆ ತುಂಬಿ ಸಾಗಿಸುತ್ತಿದ್ದರು. ಟೆಂಪೊಗಳು ಬಂದ ಮೇಲೆ ಹೊಂಗೆ ಸೊಪ್ಪು ಹಾಸಿ ಅದರ ಮೇಲೆ ಬುಟ್ಟಿಗಳನ್ನೂ, ಬಿಡಿ ಕಾಯಿಗಳನ್ನೂ ತುಂಬುತ್ತಿದ್ದೆವು. ಕೆಲವೊಮ್ಮೆ ಇಳಿಸಂಜೆಯಾಗುತ್ತಿತ್ತು. 'ಊರಲ್ಲಿ ಬಿಡುತ್ತೇವೆ ಹತ್ತಿ' ಎಂದು ಕೂರಿಸುತ್ತಿದ್ದ ಡ್ರೈವರುಗಳು ಸಾಬರ ಕಣ್ಣ ಸನ್ನೆಯ ಮೇಲೆ ಬರ್ರ್ರೋ ಎಂದು ಓಡಿಸಿಬಿಡುತ್ತಿದ್ದರು. ಸಾಬರಿಗಿದ್ದ ದುರಾಸೆ ಒಂದೆ- ಅನ್‌ಲೋಡನ್ನೂ ಈ ಹುಡುಗರೆ ಮಾಡಿಬಿಡಲಿ ಎಂಬುದಾಗಿರುತ್ತಿತ್ತು. ಬನಿಯನ್ನು ಚೆಡ್ಡಿಗಳಲ್ಲಿ ಯಾವುದೊ ಗ್ರಹದಿಂದ ಉದಿಸಿದವಂತೆ ಕಾಣುತ್ತಿದ್ದ ನಮ್ಮನ್ನು ಮೇಷ್ಟ್ರುಗಳೋ, ಇಲ್ಲ ಕ್ಲಾಸ್ ಮೇಟುಗಳೊ ನೋಡಿಬಿಟ್ಟರೆ ಏನು ಗತಿಯಪ್ಪಾ ಎಂದು ಪತರುಗುಟ್ಟುತ್ತಿದ್ದೆವು.

2

ಪಂಪನ ಆದಿಯಾಗಿ ಬಹುಪಾಲು ಕನ್ನಡದ ಕವಿಗಳು ಕಳಿತ ಮಾವಿನ ಕುರಿತು ಬರೆದದ್ದು ಕಡಿಮೆ. ಇವರ ಕಾವ್ಯಗಳಲ್ಲಿ ಬರುವ ಉಪಮೆ, ರೂಪಕ, ಪ್ರತಿಮೆಗಳು ಚಿಗುರಿ ಹೂ ಬಿಟ್ಟ ಮಾವು, ಕೋಗಿಲೆ ಜೊತೆ ಸೇರಿಸಿ ವರ್ಣಿಸಿದ್ದೆ ವರ್ಣಿಸಿದ್ದು. ಹಾಗೆ ನೋಡಿದರೆ ಸೂಫಿ ಕವಿಗಳು ಮಾವಿನ ಹಣ್ಣನ್ನು ಬಗೆ ಬಗೆಯಾಗಿ ಬಣ್ಣಿಸಿದ್ದಾರೆ. ಕವಿ ರವೀಂದ್ರರೂ ಸಹ ಅವರ ಅನೇಕ ಕವಿತೆಗಳಲ್ಲಿ ಮತ್ತು ಆತ್ಮಕತೆಯಲ್ಲಿ ಮಾವನ್ನು ಹಲವಾರು ಬಾರಿ ವರ್ಣಿಸಿದ್ದಾರೆ. ಮುಸ್ಲಿಂ ಕವಿಗಳಂತೂ ಮಾವನ್ನು ಅಮೃತ ಫಲ ಎನ್ನುತ್ತಾರೆ. ಆದರೆ ಕನ್ನಡದ ಕವಿಗಳು ಸೇಬು, ಕಿತ್ತಳೆ, ಬಾಳೆಗೆ ನೀಡುವಷ್ಟು ಜಾಗವನ್ನೂ ಸಹ ಮಾವಿನ ಹಣ್ಣಿಗೆ ನೀಡಿಲ್ಲ. ಕನ್ನಡದ ಬಹುಪಾಲು ಲೇಖಕರು ಕೃಷಿ ಮೂಲದವರಲ್ಲ. ಹೂ ಬಿಟ್ಟು, ಬಣ್ಣ ತೊಟ್ಟು ಹಣ್ಣಾಗುವವರೆಗೆ ಚೋದ್ಯದ ಅರಿವೆ ಅವರಿಗೆ ಇದ್ದಂತಿಲ್ಲವೆಂಬ ಗುಮಾನಿ ನನ್ನದು. ಇವರ ಜಾಡಿಗೆ ಬಿದ್ದ ನಮ್ಮ ಬಯಲು ಸೀಮೆಯ ಬರೆಹಗಾರರೂ ಸಹ ಮಾವನ್ನು ನಿರ್ಲಕ್ಷಿಸಿದ್ದಾರೆ. ಎಲ್ಲರೂ ವಸಂತದೊಳಗೆ ಕೋಗಿಲೆ ಹಾಡುತ್ತದೆ ಎಂದೆ ಬರೆದಿದ್ದಾರೆ. ವಾಸ್ತವದಲ್ಲಿ ಚೈತ್ರ ಮಾಸದಲ್ಲಿ ಕೋಗಿಲೆ ಹಾಡುವುದಿಲ್ಲ. ಆಗ ಗೊಗ್ಗರು ಗೊಗ್ಗರು ಧ್ವನಿಯಲ್ಲಿ ಶಬ್ದ ಮಾಡುತ್ತದೆ. ಅದರ ಕೂಗು ತಾರಕಕ್ಕೇರುವುದೇ ವೈಶಾಖ ಮತ್ತು ಜೇಷ್ಠಗಳಲ್ಲಿ. ಕಾಗೆಗಳಾಗಲಿ, ಕೋಗಿಲೆಗಳಾಗಲೀ ಬೆದೆಗೆ ಬಂದು ಮೊಟ್ಟೆ ಇಡುವುದು ವೈಶಾಖದ ತುದಿಯ ದಿನಗಳಲ್ಲಿ. ಬೇವು ಹೂ ಬಿಟ್ಟು ಹಣ್ಣಾಗುವ ಕಾಲಕ್ಕೆ ಇವುಗಳು ಮೊಟ್ಟೆಯಿಟ್ಟು ಮರಿ ಮಾಡುತ್ತವೆ. ಬೆದೆ ಬಂದಾಗ ಮಾತ್ರ ಇಂಪಾದ ಧ್ವನಿ ತಾಳುವ ಕೋಗಿಲೆಗಳು ಕೂಡಿದ ಮೇಲೆ ಗಂಟಲು ಬಿದ್ದು ಹೋದಂತೆ ಮೌನವಾಗುತ್ತವೆ. ಇಲ್ಲ ಗೊಗ್ಗರಾಗುತ್ತವೆ. ನೆಲದ ಸ್ಪರ್ಶವಿಲ್ಲದ ಕವಿಗಳು ವಸಂತದೊಳಗೆ ಕೋಗಿಲೆಗೆ ಇಂಪಾದ ಧ್ವನಿ ಎಂದು ಬರೆಯುತ್ತಾರೆ.

ಭಾರತದ ಕಾವ್ಯ, ಇತಿಹಾಸ ಪುರಾಣಗಳಲ್ಲೂ ಮಾವಿನ ಕುರಿತು ಅಪಾರ ಉಲ್ಲೇಖಗಳಿವೆ. ಗೋವಾದ ಜನಪದ ಕಥೆಗಳ ಪ್ರಕಾರ ಮಾವಿನ ಮರವನ್ನು ಹನುಮಂತ ಹೊತ್ತು ತಂದ ಎಂದು ಹೇಳಲಾಗುತ್ತದೆ. ಪಾರ್ವತಿಯ ಒತ್ತಾಯದ ಮೇರೆಗೆ ಸ್ವರ್ಗ ಸಮಾನವಾದ ಈ ವೃಕ್ಷವನ್ನು ಶಿವ ಸೃಷ್ಟಿಸಿದನೆಂಬ ಕತೆಗಳಿವೆ. ಈಶಾನ್ಯ ಭಾರತದಲ್ಲಿ ವಿಕಾಸವಾದ ಈ ವೃಕ್ಷವು ನಿಧಾನಕ್ಕೆ ಎಲ್ಲ ಕಡೆ ಹರಡಿಕೊಂಡಿದೆ. ಕಲ್ಪದ್ರುಮ ಎಂದು ಕರೆಸಿಕೊಳ್ಳುವ ಮಾವು ಉಪಖಂಡದ ಜಾನಪದ ಆಚರಣೆಗಳಲ್ಲೂ ತುಂಬಿ ಹೋಗಿದೆ. ಮಧ್ಯ ಭಾರತದ ಬುಡಕಟ್ಟುಗಳ ಯುವತಿಯರು ಮದುವೆಗೆ ಮೊದಲು ಮಾವಿನ ಮರವನ್ನು ಅಪ್ಪಿಕೊಳ್ಳುತ್ತಾರೆ. ಅನೇಕ ಕಡೆ ಅಶ್ವತ್ಥದ ಹಾಗೆಯೆ ಮಾವಿಗೂ ಗಂಡು ಹೆಣ್ಣುಗಳು ಪ್ರದಕ್ಷಿಣೆ ಹಾಕಿ ನಮಸ್ಕರಿಸುವ ಕುರಿತು ಉಲ್ಲೇಖಗಳಿವೆ. ಇಲ್ಲಿ ಮಾವಿನ ಎಲೆಯಿಂದ ಹಿಡಿದು ಮರದ ತುಂಡಿನವರೆಗಿನ ಮರದ ಭಾಗಗಳನ್ನು ಮದುವೆಯಿಂದ ಹಿಡಿದು ತಿಥಿಯವರೆಗೆ ಬಳಸಲಾಗುತ್ತದೆ. ಬಿದಿರು, ತೆಂಗುಗಳ ಬಗ್ಗೆಯೂ ಈ ರೀತಿಯ ಅಭಿಪ್ರಾಯಗಳಿದ್ದರೂ ಮಾವಿನಷ್ಟು ಸೊಬಗು, ಸಂಭ್ರಮಗಳು ಉಳಿದೆರಡಕ್ಕೆ ಇಲ್ಲ.

ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಮಾವಿನ ವರ್ಣನೆ ಅನೇಕ ಕಡೆಗಳಲ್ಲಿ ಬರುತ್ತದೆ. ರಾಮಾಯಣದಲ್ಲಿ ಚಿತ್ರಕೂಟದಲ್ಲಿ ಅಸಂಖ್ಯಾತ ಮಾವುಗಳಿದ್ದ ಪ್ರಸ್ತಾಪ ಬರುತ್ತದೆ. ದುಡಿವ ಸಮುದಾಯಗಳಿಂದ ಬಂದ ವಾಲ್ಮೀಕಿ ಮತ್ತು ಕಾಳಿದಾಸ ಮುಂತಾದವರು ಈ ವೃಕ್ಷದ ವಿಲಾಸವನ್ನು ಸಂಭ್ರಮಿಸುತ್ತಾರೆ. ಕಾಳಿದಾಸನಂತೂ ಅವನ ಕೃತಿಗಳಲ್ಲೂ ಮೈ ದುಂಬಿ ಹಾಡಿದ್ದಾನೆ. ಅವನ ಬಹುಪಾಲು ಎಲ್ಲ ಕೃತಿಗಳಲ್ಲೂ ಮಾವಿನ ಚಿತ್ರಣವಿದೆ. ಅವನ ಮೇಘದೂತದಲ್ಲಿ ಆಮ್ರಕೂಟವೆಂಬ ಬೆಟ್ಟದ ವರ್ಣನೆ ಇದೆ. 'ಬೆಟ್ಟದ ಸುತ್ತಲೂ ಹದಕ್ಕೆ ಬಂದ